## ಮೂರನೇ ಕಾಲು

ಗಣೇಶ ನಗರದಲ್ಲಿ ಓದುತ್ತಿದ್ದ. ನಗರದ ಸ್ನೇಹಿತರೊಂದಿಗೆ ಸೇರಿ ದುಶ್ಚಟಗಳನ್ನು ರೂಢಿಸಿಕೊಂಡಿದ್ದ. ಅವುಗಳ ನಿರ್ವಹಣೆಗೆ ಸಾಕಷ್ಟು ಹಣ ಬೇಕಾಗುತ್ತಿದ್ದುದರಿಂದ ಆಗಿಂದಾಗ್ಗೆ ಹಳ್ಳಿಯಲ್ಲಿದ್ದ ತಂದೆಗೆ ಪತ್ರ ಬರೆದು ಹಣ ತರಿಸಿಕೊಳ್ಳುತ್ತಿದ್ದ. ಈ ಬಾರಿಯೂ ತಂದೆಯನ್ನು ಬೆದರಿಸಿ ಹಣ ತರಿಸಿಕೊಳ್ಳಲು ಅಪಘಾತವಾಗಿ ಕಾಲು ಮುರಿದಿರುವ ಬಗ್ಗೆ ಆತಂಕ ಸೃಷ್ಟಿಸಲು ಪ್ರಯತ್ನಿಸಿದ. ನಾಲ್ಕಾರು ದಿನಗಳ ನಂತರ ಹಣದ ನಿರೀಕ್ಷೆಯಲ್ಲಿದ್ದ ಗಣೇಶನಿಗೆ ತಂದೆಯಿಂದ ಪತ್ರ ಬಂತು, ಅದರಲ್ಲಿ 'ಮಗು ಗಣೇಶ. ನಿನ್ನ ಕಾಲು ಅಪಘಾತಕ್ಕೀಡಾಗಿರುವುದರ ಬಗ್ಗೆ ತಿಳಿದು ವಿಷಾದವಾಯಿತು. ಇದು ಮೂರನೇ ಕಾಲು. ಈಗಾಗಲೇ ಹಿಂದಿನ ಪತ್ರಗಳಲ್ಲಿಯೇ ನಿನ್ನ ಎರಡೂ ಕಾಲುಗಳು ಮುರಿದಿದ್ದರ ಬಗ್ಗೆ ತಿಳಿಸಿದ್ದೆ. ಸದ್ಯಕ್ಕೆ ಹಣದ ಅಡಚಣೆಯಿರುವುದರಿಂದ ಈಗ ಹಣ ಕಳುಹಿಸಲು ಸಾಧ್ಯವಿಲ್ಲವಾಗಿದ್ದು, ಉಳಿದಿರುವ



ಮೂರ್ನಾಲ್ಕು ಕಾಲುಗಳಲ್ಲಿಯೇ ನಿನ್ನ ಪದವಿ ಶಿಕ್ಷಣವನ್ನು ಪೂರೈಸಿಕೊಂಡು ಬರಬೇಕೆಂದು ತಿಳಿಸುವೆ' ಎಂದಿತ್ತು.

**ಪ.ನಾ.ಹಳ್ಳಿ.ಹರೀಶ್ ಕುಮಾರ್**



ಕಲೆ: ಗಣೇಶ ಆಚಾರ್ಯ

## ರಂಧ್ರ ಎಷ್ಟಿದೆ?

ಶಾಲಾ ಮಕ್ಕಳಿಗೆ ಬ್ಯಾಡ್ಮಿಂಟನ್ ಕೋಚ್ ಆಟದ ಬಗೆಗೆ ಹಲವಾರು ವಿವರಗಳನ್ನು ನೀಡುತ್ತಾ, 'ಒಬ್ಬ ತರಬೇತುದಾರನಿಗೆ ಆಟದ ಬಗೆಗೆ ಎಲ್ಲ ವಿಚಾರಗಳೂ ತಿಳಿದಿರುತ್ತವೆ. ನಿಮಗೆ ಏನೇ ಅನುಮಾನ ಇದ್ದರೂ ನನ್ನಲ್ಲಿ ಕೇಳಿ. ಫಟ್ ಫಟಾಂತ ಉತ್ತರ ಕೊಡ್ತೀನಿ' ಎಂದ. ಹುಡುಗನೊಬ್ಬ ಜಾರುತ್ತಿರುವ ಚಡ್ಡಿಯನ್ನು ಮೇಲೆಳೆದುಕೊಳ್ಳುತ್ತ ಎದ್ದು ನಿಂತು, 'ಸರ್, ಬ್ಯಾಡ್ಮಿಂಟನ್ ನೆಟ್ ಉಂಟಲ್ಲ, ಅದರಲ್ಲಿ ಎಷ್ಟು ರಂಧ್ರಗಳಿವೆ ಅಂತ ಹೇಳಬಹುದಾ?' ಎಂದ.

**ಪ. ರಾಮಕೃಷ್ಣ ಶಾಸ್ತ್ರಿ**